ಪ್ರಮಾಣೀಕರಿಸಲಾದ ದಿನಾಂಕಃ- **12.11.2025.**

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ. ಹೆಚ್ ಎನ್ ವಕೀಲರಿಂದಃ-

ನಾನು CIT Ponnampet college ನಲ್ಲಿ ಮತ್ತು P.U.C. Saint Annes college ನಲ್ಲಿ ಓದಿದ್ದೇನೆ. college ಸಮಯದಿಂದ ಆರೋಪಿ Facebook ನಿಂದ ಪರಿಚಯ ಎಂದರೆ ಸರಿಯಲ್ಲ. CIT Ponnampet college ನಲ್ಲಿ ಓದುತ್ತಿದ್ದಾಗ ಆರೋಪಿ ಬಂದು ನನ್ನನ್ನು ಬೇಟಿ ಕೂಡ ಆಗಿರುತ್ತಾನೆ ಎಂದರೆ ಸರಿಯಲ್ಲ, ನನಗೆ ಆಗ Facebook account ಇರಲಿಲ್ಲ. 2018 ರಲ್ಲಿ Facebook account ತೆರೆದಿರುತ್ತೇನೆ. 2013 ರಲ್ಲಿ ಡಿಗ್ರಿ ಮೊದಲನೇ ವರ್ಷ ಓದುತ್ತಿದ್ದೆ. ನಾನು ಮತ್ತು ಆರೋಪಿ Facebook ನಲ್ಲಿ ಎಂದಿಗೂ chat ಮಾಡಿಲ್ಲ, ಆರೋಪಿ ನನ್ನ ಹೆಸರಿನ fake account ಅನ್ನು ಜಾಲತಾಣದಲ್ಲಿ ಬಿಟ್ಟು ಚಾಸಾ 2 ರವರಿಗೆ ಗೊತ್ತಾಗಿ ನನಗೆ ಗೊತ್ತಾಗಿರುತ್ತದೆ. ನನಗೆ ಶೀಲು ದೇಚಮ್ಮ ಎಂಬ ಹೆಸರಿನ Facebook account college ಸಮಯದಲ್ಲಿದ್ದು ನೌಶಾದ್ ಆಜೀಜ್ ಎಂಬ ಹೆಸರಿನಲ್ಲಿ ಆತನ account ಇದ್ದು ಕಾಲೇಜ್ ಸಮಯದಿಂದ ಪರಿಚಯ ಎಂದರೆ ಸರಿಯಲ್ಲ.

ಮೈಸೂರಿನ Ruchi the Prince ಎಂಬ lodge ಗೆ ಆರೋಪಿ ಜೊತೆ ಹೋಗಿದ್ದೇನೆ ಎಂದರೆ ಸರಿಯಲ್ಲ. 2 ವರ್ಷಗಳ ಹಿಂದೆ ಗೋವಾದ Panjim resort ನಲ್ಲಿ 4 ದಿನಗಳ ಕಾಲ ಜೊತೆಗಿದ್ದೆವು ಎಂದರೆ ಸರಿಯಲ್ಲ. ಬೆಂಗಳೂರಿನ BTM layout ನಲ್ಲಿ ಆರೋಪಿ ಜೊತೆ ಇದ್ದಾಗ ನನ್ನ ಹೆಸರಿನಲ್ಲಿ Internet ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಡಿಗ್ರಿ ಓದಿದ್ದೇನೆ ಎಂದು ಹೇಳಿದ್ದ. ಆರೋಪಿ P.U.C. fail, ಎಲ್ಲೂ ಕೆಲಸದಲ್ಲಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನನ್ನ ಜೊತೆಗಿರುವ ಫೋಟೋವನ್ನು ಜಾಲತಾಣದಲ್ಲಿ ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತಂತ್ರಜ್ಞಾನದ ಯಾವುದೇ ಜ್ಞಾನ ಇಲ್ಲದೇ ಇರುವುದರಿಂದ ಇಂತಹ ಕೃತ್ಯ ಆರೋಪಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ತಂದೆ ತಾಯಿ CEN Police station ಮತ್ತು ಎಸ್ ಪಿ ಕಚೇರಿಗೆ ಕರೆಸಿರುತ್ತಾರೆ, ಆದರೆ ಲಿಖಿತವಾಗಿ ಆದ ಬರವಣಿಗೆ

ಬಗ್ಗೆ ನನಗೆ ಗೊತ್ತಿಲ್ಲ. Fake account ಮಾಡಿದ್ದಕ್ಕೆ Facebook ಕಡೆಯಿಂದ ನನಗೆ ನನ್ನ ಗಂಡನಿಗೆ, ನನ್ನ ಕುಟುಂಬಸ್ಥರಿಗೆ Request ಬಂದಿರುತ್ತದೆ. ಶೀಲು ದೇಚಮ್ಮ ಎಂಬ Fake account ಆರೋಪಿ ತೆರೆದ ಬಗ್ಗೆ ನನಗೆ ಮಾಹಿತಿ ಇಲ್ಲ, ಆದರೆ ಆರೋಪಿಯೇ ಅಂತಹ account ಅನ್ನು open ಮಾಡಿರುತ್ತಾನೆ. ನನ್ನ Facebook account ಹೆಸರು ಕೂಡ ಶೀಲು ದೇಚಮ್ಮ ಎಂದೇ ಇರುತ್ತದೆ. ಒಂದೇ ಹೆಸರಿನಲ್ಲಿ ಎರಡು account ಗಳು ತೆರೆಯಲು ಆಗುವುದಿಲ್ಲ ಎಂದರೆ, ಹೆಸರುಗಳ ಮಧ್ಯದಲ್ಲಿ space ಹೆಚ್ಚು ಕಡಿಮೆ ಆದರೆ ಅಗುತ್ತದೆ. Whatsapp ನಲ್ಲಿ ನನಗೂ ಮತ್ತು ನನ್ನ ಗಂಡನಿಗೂ ಇಬ್ಬರಿಗೂ ಆರೋಪಿ Message ಮಾಡಿರುತ್ತಾನೆ. ನಾವೆಲ್ಲ Fake message ಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿ ಮೇಲೆ 3 ಪ್ರಕರಣಗಳನ್ನು ಹಾಕಿರುತ್ತೇನೆ, ಮೂರು ಪ್ರಕರಣಗಳಲ್ಲಿ ಒಂದೇ ರೀತಿಯ ದೂರುಗಳನ್ನು ಕೊಟ್ಟಿರುತ್ತೇನೆ. ನಿ. ಪಿ. 9 to 29 screen shot ಗಳು ಅದರಲ್ಲಿರುವ message ಗಳು ಆರೋಪಿ ಕಳುಹಿಸಿಲ್ಲ ಎಂದರೆ ಸರಿಯಲ್ಲ ಮತ್ತು ನಾನು ಅದನ್ನು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿ. ಪಿ. 3 ಮಹಜರ್ ನಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. 11.00 ರಿಂದ 01.00 ಗಂಟೆ ಒಳಗೆ ಈ ಮಹಜರ್ ಬರೆದಿದ್ದು ಮನೆಯ ಚೆಕ್ಕು ಬಂದಿ ಗೊತ್ತಿಲ್ಲ. ಫೋಟೋಗಳು ಸೃಷ್ಟಿತ ಫೋಟೋಗಳು ಎಂದರೆ ಸರಿಯಲ್ಲ. ಆರೋಪಿಗೆ 2 ಲಕ್ಷ ಹಣ ಕೊಡಲು ತಪ್ಪಿಸಲು ಈ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯೇ ನನಗೆ ದುಡ್ಡು ಕೊಡಬೇಕಾಗಿದೆ. ನಾನು ಆರೋಪಿಗೆ ಕೊಟ್ಟಂತಹ ಹಣದ Bank statement ಗಳನ್ನು ಕೊಡಲು ತೊಂದರೆ ಇಲ್ಲ. ಆರೋಪಿ ಜಪಾನ್‌ಗೆ 2018 – 2019 ರಲ್ಲಿ ಹೋಗಿರುವುದಾಗಿ ಹೇಳಿರುತ್ತಾನೆ. ಜಪಾನ್‌ಗೆ ಹೋಗಬೇಕೆಂದು ಆರೋಪಿ ನನ್ನನ್ನು ಪೊನ್ನಂಪೇಟೆಯ ತಾಯಿಯ ಮನೆಗೆ ಬಿಟ್ಟು ಜಪಾನ್‌ಗೆ ಹೋದ ಎಂದರೆ ಸರಿಯಲ್ಲ. ಆರೋಪಿ ನನ್ನನ್ನು ಮನೆಗೆ ಬಿಟ್ಟಾಗ ನನ್ನ ಅಕ್ಕನ ಮಗಳು ಇದ್ದಳು ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಅಮಾನತುಪಡಿಸಿಕೊಂಡ ಎರಡು ಮೊಬೈಲ್‌ಗಳ ಪೈಕಿ ಒಂದು ಮೊಬೈಲ್

ಆರೋಪಿಯದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಕೊಲೆ ಬೆದರಿಕೆಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ